ಡಿ.ಡಬ್ಲೂಃ 23

<u>ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲು :- ವಾದಿ ಪರವಾಗಿ Sri. NIB, ವಕೀಲರಿಂದ</u>

ದಾವಾ ಆಸ್ತಿಯ ಕುರಿತು ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಸರ್ವೇ ನಂ.6/1 ಕ್ಷೇತ್ರ 2 ಎಕರೆ ಚಿಲ್ಲರೆ ಇರಬಹುದು. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಇಂದಿನವರೆಗು ವ್ಯವಸಾಯದ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ಸರ್ವೇ ನಂ.6/1 ಇಲ್ಲಿಯವರೆಗು ವಿಭಜನೆ ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಅತಿಕ್ರಮವಾಗಿ ಪ್ರವೇಶಿಸಿ ಬಣವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಿರುವ ಕುರಿತು ದಾಖಲೆ ನೋಡಿರುತ್ತೇನೆ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಲು ಭೂ ಪರಿವರ್ತನೆ ಆದೇಶದ, ಅನುಮೊದಿತ ನಕ್ಷೆ ಇರುತ್ತದೆ. ಅಂತಹ ದಾಖಲೆಯನ್ನು ನೋಡಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಭೂ ಪರಿವರ್ತನೆ ಆಗಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ವಿಚಾರಗಳು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಡಿ.167 ಸೃಷ್ಠಿಸಿಕೊಂಡಿರುವ

ದಾಖಲೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ಲಾಟ ನಂ.13 ಪಂಚಾಯತಿ ಆಸ್ತಿಯು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

ನಿಡಿ.167 ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಡಿ.168 ರ ಭೂ ಆಕರಣೆ ಯಾದಿ ಪ್ರತಿಗಳ ಈ ಹಿಂದಿನ ಮಾಲೀಕರ ಪ್ರತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಡಿ.168 ಮೂಲ ಮಾಲೀಕರ ಹೆಸರಿನಲ್ಲಿ ಇರದೆ ಇದ್ದು ಅವುಗಳನ್ನು ಪಂಚಾಯತಿಯೊಂದಿಗೆ ಮಿಲಾಪಿಯಾಗಿ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಪ್ಲಾಟ ಸಂಖ್ಯೆ 13 ಅಸ್ತಿತ್ವದಲ್ಲಿ ಇರದೆ ಇದ್ದು ಪಂಚಾಯತಿಯವರು ಖಾತೆ ಬದಲಾವಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗು ಭೂ ಪರಿವರ್ತನೆ ಆಗದೆ ಇದ್ದು ತುಂಡು ಭೂಮಿ ಕಾಯ್ದೆ ಅಡಿಯಲ್ಲಿ ಬರುವ ಕಾರಣ ಪಂಚಾಯತಿಯವರು ಯಾವುದೇ ಖಾತೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.167 ರಿಂದ 169 ದಾವಾ ಆಸ್ತಿಗೆ ಸಂಬಂದಿಸದೆ ಇರುವ ದಾಖಲೆಗಳಾಗಿವೆ ಎಂದರೆ ಸರಿಯಲ್ಲ.

ನಿಡಿ.167 ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 4 ರವರ ಮಾಲೀಕತ್ವಕ್ಕೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಪ್ಲಾಟ ನಂ.13 ಕ್ಕೆ ನೀರು ಸರಬರಾಜು ಮತ್ತು ವಿದ್ಯುತ ಸರಬರಾಜು ಮಾಡಿರುವ ಕುರಿತು ಯಾವುದೇ ಅಧಿಕೃತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ಉಳಿದ ಪ್ರತಿವಾದಿಯರು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

O.S.48-16

<u>(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ

ಡಿ.ಡಬ್ಲೂಃ 24

ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು :- ವಾದಿ ಪರವಾಗಿ Sri. NIB, ವಕೀಲರಿಂದ

ಮುತ್ತಯ್ಯ ನನ್ನ ಸಹೋದರ ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಒಟ್ಟಿಗೆ ವಾಸಿಸುತ್ತೇವೆ ಎಂದರೆ ಸರಿ. ಪ್ಲಾಟ ನಂ.6 ನ್ನು ವಾರಸಾ ಪ್ರಕಾರ ಬದಲಾವಣೆ ಮಾಡಿಕೊಳ್ಳುವ ಕಾಲಕ್ಕೆ ಪಂಚಾಯತಿಯಲ್ಲಿ ಆದ ಠರಾವಿನ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿಯ ಕುರಿತು ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಸರ್ವೇ ನಂ.6 ಇದ್ದು ಕ್ಷೇತ್ರ ನನಗೆ ಗೋತ್ತಿಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಇಂದಿನವರೆಗು ವ್ಯವಸಾಯದ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. 1966-67 ರ ಖರೀದಿ ಕಾಲಕ್ಕೆ ನಾನು ಜನಿಸಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾನು ಸಣ್ಣವನಿದ್ದೆ ಎಂದು ನುಡಿಯುತ್ತಾರೆ. ನಾನು ಖರೀದಿ ಕಾಲಕ್ಕೆ ಜನಿಸದೆ ಇರುವ ಕಾರಣ ಖರೀದಿಯ ಕುರಿತು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಿರುವ ಕುರಿತು ದಾಖಲೆ ನೋಡಿರುತ್ತೇನೆ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಲು ಭೂ ಪರಿವರ್ತನೆ ಆದೇಶದ, ಅನುಮೊದಿತ ನಕ್ಷೆ ಇರುತ್ತದೆ. ಅಂತಹ ದಾಖಲೆಯನ್ನು ನೋಡಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಭೂ ಪರಿವರ್ತನೆ

ಆಗಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ವಿಚಾರಗಳು ನನಗೆ ವೈಯಕ್ತಿಕವಾಗಿ ಗೋತ್ತಿಲ್ಲ ಎಂದರೆ ಸರಿಯಲ್ಲ. ನಿಡಿ.170 ಸೃಷ್ಠಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಪ್ಲಾಟ ನಂ.6 ಪಂಚಾಯತಿ ಆಸ್ತಿ ಸಂಖ್ಯೆ 690 ಎಂಬ ಆಸ್ತಿಯು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಪ್ಲಾಟ ನಂ.6 ರಲ್ಲಿ ನನ್ನ ಅಜ್ಜನ ಕಾಲದಲ್ಲಿಯೇ ಮನೆ ನಿರ್ಮಿಸಲಾಗಿದೆ. ಪ್ಲಾಟ ನಂ.6 ರಲ್ಲಿ ಮನೆ ಇರುವ ಕುರಿತು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ಲಾಟ ನಂ.6 ರಲ್ಲಿ ಮನೆ ನಿರ್ಮಿಸಲು ಪರವಾನಗಿ ಬೇಕಾಗುತ್ತದೆ ಎಂದರೆ ಸರಿ. ಪಾಟ ನಂ.6 ರಲ್ಲಿ ಮನೆ ನಿರ್ಮಾಣ ಮಾಡಲು ಪರವಾನಗಿ ಪ್ರತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಾನೂನು ಬಾಹಿರವಾಗಿ ಮನೆ ನಿರ್ಮಿಸಿರುವ ಕಾರಣ ಯಾವುದೇ ಪರವಾನಗಿ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ.173 ರಿಂದ 175 ವಿದ್ಯುತ ಬಿಲ್ಲನಲ್ಲಿ ಆಸ್ತಿ ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ.173 ರಿಂದ 175 ರಲ್ಲಿ ಮನೆ ಸಂಖ್ಯೆ ನಮೂದಿಸದೆ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ.170 ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಡಿ.171 ಮತ್ತು 172 ರ ಭೂ ಆಕರಣೆ ಯಾದಿ ಪ್ರತಿಗಳ ಈ ಹಿಂದಿನ ಮಾಲೀಕರ ಪ್ರತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಡಿ.171 ಮತ್ತು

172 ಮೂಲ ಮಾಲೀಕರ ಹೆಸರಿನಲ್ಲಿ ಇರದೆ ಇದ್ದು ಅವುಗಳನ್ನು ಪಂಚಾಯತಿಯೊಂದಿಗೆ ಮಿಲಾಪಿಯಾಗಿ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಆಸ್ತಿ ಸಂಖ್ಯೆ 190 ಗಳು ಅಸ್ತಿತ್ವದಲ್ಲಿ ಇರದೆ ಇದ್ದು ಪಂಚಾಯತಿಯವರು ಖಾತೆ ಬದಲಾವಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗು ಭೂ ಪರಿವರ್ತನೆ ಆಗದೆ ಇದ್ದು ತುಂಡು ಭೂಮಿ ಕಾಯ್ದೆ ಅಡಿಯಲ್ಲಿ ಬರುವ ಕಾರಣ ಪಂಚಾಯತಿಯವರು ಯಾವುದೇ ಖಾತೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.170 ರಿಂದ 175 ದಾವಾ ಆಸ್ತಿಗೆ ಸಂಬಂದಿಸದೆ ಇರುವ ದಾಖಲೆಗಳಾಗಿವೆ ಎಂದರೆ ಸರಿಯಲ್ಲ.

ನಿಡಿ.170 ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 4 ರವರ ಮಾಲೀಕತ್ವಕ್ಕೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಪ್ಲಾಟ ನಂ.6 ಕ್ಕೆ ನೀರು ಸರಬರಾಜು ಮತ್ತು ವಿಧ್ಯುತ ಸರಬರಾಜು ಮಾಡಿರುವ ಕುರಿತು ಯಾವುದೇ ಅಧಿಕೃತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ಉಳಿದ ಪ್ರತಿವಾದಿಯರು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

<u>(ನನ್ನ ಉಖ್ತುಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ

ಡಿ.ಡಬ್ಲೂಃ 25

ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು :- ವಾದಿ ಪರವಾಗಿ Sri. NIB, ವಕೀಲರಿಂದ

ಪ್ಲಾಟ ನಂ.15 ರ ಕುರಿತು ಯಾವುದೇ ಪಂಚಾಯತಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಅವಿದ್ಯಾವಂತ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ವಿಚಾರಗಳು ನನಗೆ ವೈಯಕ್ತಿಕವಾಗಿ ಗೋತ್ತಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಪಂಚಾಯತಿ ಖಾತೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ಸರ್ವೇ ನನಗೆ ಗೋತ್ತಿಲ್ಲ, ವಿಸ್ತೀರ್ಣ 2 ಎಕರೆ ಚಿಲ್ಲರೆ ಗುಂಟೆ ಇರಬಹುದು. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಇಂದಿನವರೆಗು ವ್ಯವಸಾಯದ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಿರುವ ಕುರಿತು ದಾಖಲೆ ನೋಡಿರುತ್ತೇನೆ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಲು ಭೂ ಪರಿವರ್ತನೆ ಆದೇಶದ, ಅನುಮೊದಿತ ನಕ್ಷೆ ಇರುತ್ತದೆ. ಅಂತಹ ದಾಖಲೆಯನ್ನು ನೋಡಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಭೂ ಪರಿವರ್ತನೆ ಆಗಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ವಿಚಾರಗಳು ನನಗೆ ವೈಯಕ್ತಿಕವಾಗಿ ಗೋತ್ತಿಲ್ಲ ಎಂದರೆ ಸರಿಯಲ್ಲ. ನಿಡಿ.176 ಸೃಷ್ಠಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಪ್ಲಾಟ ನಂ.15 ಪಂಚಾಯತಿ ಆಸ್ತಿಯು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಪ್ಲಾಟ ನಂ.15 ಅಸ್ತಿತ್ವದಲ್ಲಿ ಇರದೆ ಇದ್ದು ಪಂಚಾಯತಿಯವರು ಖಾತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಇಲ್ಲಿಯವರೆಗು ಭೂ ಪರಿವರ್ತನೆ ಆಗದೆ ಇದ್ದು ತುಂಡು ಭೂಮಿ ಕಾಯ್ದೆ ಅಡಿಯಲ್ಲಿ ಬರುವ ಕಾರಣ ಪಂಚಾಯತಿಯವರು ಯಾವುದೇ ಖಾತೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.176 ದಾವಾ ಆಸ್ತಿಗೆ ಸಂಬಂದಿಸದೆ ಇರುವ ದಾಖಲೆಗಳಾಗಿವೆ ಎಂದರೆ ಸರಿಯಲ್ಲ.

ನಿಡಿ.176 ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 4 ರವರ ಮಾಲೀಕತ್ವಕ್ಕೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಪ್ಲಾಟ ನಂ.15 ಕ್ಕೆ ನೀರು ಸರಬರಾಜು ಮತ್ತು ವಿಧ್ಯುತ ಸರಬರಾಜು ಮಾಡಿರುವ ಕುರಿತು ಯಾವುದೇ ಅಧಿಕೃತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ಉಳಿದ ಪ್ರತಿವಾದಿಯರು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>
<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>
ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ